**ದಿನಾಂಕಃ 22.08.2026 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್.ಎನ್.ಎಸ್. ವಕೀಲರಿಂದಃ**

ಅರ್ಜಿದಾರಳು ನನ್ನ ಹೆಂಡತಿ ಇರುತ್ತಾರೆ. ನಮ್ಮ ಮದುವೆ ದಿಃ 27.05.2016 ರಂದು ಆಗಿರುತ್ತದೆ ಎಂದರೆ ಸರಿ. ನಮ್ಮ ಮದುವೆಯೂ ಮರಡಿಪುರ ಗ್ರಾಮದ ಮರಡೇಶ್ವರ ಕಲ್ಯಾಣ ಮಂಟಪದಲ್ಲಿ ನಡೆದಿರುತ್ತದೆ. ಮದುವೆ ಸಮಯದಲ್ಲಿ ನನಗೆ ವರದಕ್ಷಿಣೆಯಾಗಿ ರೂ.80,000/– ನಗದನ್ನು ಕೊಟ್ಟಿದ್ದರುತ್ತಾರೆ ಎಂದರೆ ಸರಿಯಲ್ಲ. ಮದುವೆಯ ಖರ್ಚನ್ನು ಅರ್ಜಿದಾರಳ ಮನೆಯವರೆ ನಿರ್ವಹಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮದುವೆಯ ಖರ್ಚು ವೆಚ್ಚವನ್ನು ವಧುವಿನ ಮನೆಯವರೆ ನಿರ್ವಹಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮದುವೆಯ ಖರ್ಚನ್ನು ನಾನೇ ನಿರ್ವವುಸಿರುತ್ತೇನೆ ಎಂದು ನುಡಿಯುತ್ತಾರೆ.

ನಮ್ಮ ಮದುವೆಯ ಖರ್ಚನ್ನು ಅರ್ಜಿದಾರಳ ಮನೆಯವರೆ ನೋಡಿಕೊಂಡಿದ್ದು ಮತ್ತು ನನಗೆ ಮದುವೆ ಸಮಯದಲ್ಲಿ ರೂ.80,000/– ನಗದು ನೀಡಿದ್ದರೂ ಕೂಡಾ ನಾನು ಉದ್ದೇಶಪೂರಕರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮಿಬ್ಬರ ದಾಂಪತ್ಯ ಜೀವನದಿಂದ ನಮಗೆ ಒಂದು ಹೆಣ್ಣು ಮಗು ಜನಿಸಿರುತ್ತಾಳೆ ಎಂದರೆ ಸರಿ. ಮದುವೆಯ ನಂತರ ನಾನು 3 ವರ್ಷಗಳ ಕಾಲ ಅರ್ಜಿದಾರಳನ್ನು ಚೆನ್ನಾಗಿ ನೋಡಿಕೊಂಡಿರುತ್ತೇನೆ ಎಂದರೆ ಸಾಕ್ಷಿಯೂ ಅರ್ಜಿದಾರಳೇ ಕದ್ದು ಕದ್ದುಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಅರ್ಜಿದಾರಳಿಗೆ ವರದಕ್ಷಿಣೆ ತರುವಂತೆ ಕಿರುಕುಳ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಅದೇರೀತಿ ಕೆಲಸಕ್ಕೆ ಹೋಗಿ ಹಣ ತರುವಂತೆ ನಾನು ಅರ್ಜಿದಾರಳಿಗೆ ಪಿಡಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಪ್ರತಿದಿನ ಕುಡಿದು

ಬಂದು ಅರ್ಜಿದಾರಳಿಗೆ ಹೊಡೆದು ಬಡಿದು ಕಿರುಕುಳ ಕೊಡುತ್ತಿದ್ದೆ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನನ್ನ ತಾಯಿ ಮತ್ತು ತಂಗಿ ಕೂಡಾ ಅರ್ಜಿದಾರಳಿಗೆ ಹೊಡೆಯುತ್ತಿದ್ದರು ಎಂದರೆ ಸರಿಯಲ್ಲ.

ನನಗೆ ಮಧ್ಯಪಾನ ಮಾಡುವ ಅಭ್ಯಾಸ ಮೊದಲಿಂದಲೂ ಇದೆ ಎಂದರೆ ಸರಿ. ನನ್ನ ತಾಯಿಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬಳು ಮಗಳು ಇರುತ್ತಾಳೆ. ನನ್ನ ತಮ್ಮನ ಹೆಸರು ಮಹದೇವ ಮತ್ತು ನನ್ನ ತಂಗಿಯ ಹೆಸರು ರಾಜಮ್ಮ ಇರುತ್ತದೆ.

ನಾವು ಗಲಾಟೆ ಮಾಡಿ ಅರ್ಜಿದಾರಳನ್ನು ಊರಿನಲ್ಲೇ ಬಿಟ್ಟು ನಾವೆಲ್ಲರೂ ತಿ ನರಸೀಪುರದಲ್ಲಿ ಮನೆ ಮಾಡಿ ವಾಸವಾಗಿದ್ದೇವು ಎಂದರೆ ಸರಿಯಲ್ಲ. ನಮ್ಮ ಗ್ರಾಮ ಅಕ್ಕೂರು ಇರುತ್ತದೆ ಎಂದರೆ ಸರಿ. ಅರ್ಜಿದಾರಳು ಮತ್ತು ಅವರ ಚಿಕ್ಕ ಮಗುವನ್ನು ಅಕ್ಕೂರಿನಲ್ಲೇ ಬಿಟ್ಟು ನಾವು ತಿ ನರಸೀಪುರಕ್ಕೆ ಬಂದು ನೆಲಸಿದ್ದೇವು ಎಂದರೆ ಸರಿಯಲ್ಲ. ತಿಂಗಳುಗಟ್ಟಲೆ ನಾವು ಬಾರದ ಕಾರಣ ಅರ್ಜಿದಾರರು ಅವರ ಮಗುವನ್ನು ಕರೆದುಕೊಂಡು ತವರು ಮನೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮಗುವನ್ನು ಮೊದಲೆ ತವರು ಮನೆಗೆ ಕಳುಹಿಸಿ ಅರ್ಜಿದಾರಳು ನನ್ನೊಂದಿಗೆ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನಾನು ಅರ್ಜಿದಾರಳಿಗೆ ಮತ್ತು ಮಗುವಿಗೆ ಊಟ ಕೊಡದೆ ಸಂಪೂರ್ಣವಾಗಿ ನಿರ್ಲಕ್ಷ್ಯಮಾಡಿದ ಕಾರಣ ಅವರು ತವರು ಮನೆಯಲ್ಲಿ ಆಶ್ರಯ ಪಡೆದುಕೊಂಡರು ಎಂದರೆ ಸರಿಯಲ್ಲ. ನಾನು ಅರ್ಜಿದಾರಳು ಮತ್ತು ಮಗಳು ತವರು ಮನೆಗೆ ಹೋದಾಗಿನಿಂದ ಇಲ್ಲಿಯವರೆಗೆ ಯಾವುದೇ ಜೀವನಾಂಶ ಮತ್ತು ಸೌಕರ್ಯವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಾನು ಅರ್ಜಿದಾರಳು ತವರು ಮನೆಗೆ ಹೋದ ನಂತರ ಮಗುವನ್ನು ನೋಡಲು ಹೋಗಿರುವುದಿಲ್ಲ ಎಂದರೆ ಸಾಕ್ಷಿಯೂ ನಾನು ಒಮ್ಮೆ ಹೋದಾಗ

ಅರ್ಜಿದಾರಳು ಮತ್ತು ಅವರ ಕುಟುಂಬದವರು ನನಗೆ ಹಲ್ಲೆ ಮಾಡಿದ ಕಾರಣ ಅದಾದ ನಂತರ ನಾನು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಇದುವರೆಗೂ ಅರ್ಜಿದಾರಳ ತವರು ಮನೆಗೆ ಹೋಗದೆ ಅರ್ಜಿದಾರಳು ಮತ್ತು ಮಗುವಿಗೆ ಯಾವುದೇ ಜೀವನಾಂಶ ನಿಡದೇ ಸಂಪೂರ್ಣ ನಿರ್ಲಕ್ಷ್ಯಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)
ಓದಿ ಹೇಳಿ ಕೇಳಿ ಸರಿಯಾಗಿದೆ.

Sd/-

**(ಸಚಿನ್.ಹೆಚ್.ಆರ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ತಿ.ನರಸೀಪುರ.